ಕ್ರಮ ಕೈಗೊಳ್ಳುತ್ತದೆಯೆ? ಆಮೇಲೆ ಕೆ.ಎಸ್.ಆರ್.ಟಿ.ಸಿ., ಸಿಬ್ಬಂದಿ ವರ್ಗದವರಿಗೆ ವಸತಿ ಗೃಹಗಳನ್ನು ಕಟ್ಟಿಸಿಕೊಡುವ ಬಗ್ಗೆ ಏನು ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಎಂ.ಸಿ. ನಾಣಯ್ಯ :- ಮಾನ್ಯ ಸಭಾದ್ಯಕ್ಷರೆ, ಸಿಬ್ಬಂದಿ ಕೊರತೆ ಎಷ್ಟಿದೆ ಎಂಬ ಬಗ್ಗೆ ಪಟ್ಟಿಯನ್ನು ಕೊಟ್ಟಿದ್ದೇವೆ. ಈಗಾಗಲೇ ನೇಮಕಾತಿ ಪ್ರಕ್ರಿಯೆ ಶುರುವಾಗಿದೆ. ಚಾಲಕರುಗಳನ್ನು, ಕಂಡಕ್ಟರುಗಳನ್ನು ಮತ್ತು ತಾಂತ್ರಿಕ ಸಿಬ್ಬಂದಿಯವರನ್ನು ನೇಮಕ ಮಾಡಿಕೊಳ್ಳುವುದಕ್ಕೆ ಸಂಬಂಧಪಟ್ಟಂತೆ ಈಗಾಗಲೇ ಜಾಹೀರಾತನ್ನು ಕರೆಯಲಾಗಿದೆ. ಇನ್ನು ಮೂರು ತಿಂಗಳೊಳಗೆ ಈ ಕೊರತೆಯನ್ನು ತುಂಬಿ ಸಿಬ್ಬಂದಿ ಕೊರತೆ ಸಮಸ್ಯೆಯನ್ನು ಸಂಪೂರ್ಣವಾಗಿ ನಿವಾರಣೆ ಮಾಡುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುತ್ತದೆ.

ಅಧ್ಯಕ್ಷರು :- ಮಾನ್ಯ ಬೀಳಗಿಯವರು ಟ್ರಾನ್ಸ್‌ಪೋರ್ಟ್ ಮಿನಿಸ್ಟರ್ ಆಗಿದ್ದಾಗ 3 ಸಾವಿರ ಹೊಸ ಬಸ್‌ಗಳನ್ನು ಹಾಕುತ್ತೇವೆಂದು ಹೇಳಿದ್ದರು. ಅದಲ್ಲದೆ ಇವೆಲ್ಲಾ ಹಾಕಿದ್ದೀರಾ?

ಶ್ರೀ ಎಂ.ಸಿ. ನಾಣಯ್ಯ :- ಅವರ ಕಾಲದಲ್ಲಿ ಸುಮಾರು 1500 ಬಸ್‌ಗಳನ್ನು ಹಾಕಿದ್ದರು. ಹಣದ ಕೊರತೆ ಇದ್ದುದರಿಂದ ಪೂರ್ಣ ಪ್ರಮಾಣದಲ್ಲಿ ಬಸ್‌ಗಳನ್ನು ಹಾಕಲಿಕ್ಕೆ ಆಗಲಿಲ್ಲ ಎನ್ನುವುದು ನಿಜ. ಕೆಲವು ಸಂದರ್ಭಗಳಲ್ಲಿ ಸದನದಲ್ಲಿ ಮಾಡುತ್ತೇವೆಂದು ಹೇಳಿದ್ದರೂ ಕೂಡ ಸಂಪನ್ಮೂಲಗಳ ಕೊರತೆ ಉಂಟಾದಾಗ ಹೇಳಿದ ರೀತಿಯಲ್ಲಿ ಮಾಡುವುದಕ್ಕೆ ಸ್ವಲ್ಪ ಕಷ್ಟವಾಗುತ್ತದೆ.

ಅಧ್ಯಕ್ಷರು:- ಬಸ್‌ಗಳನ್ನು ಹಾಕುವುದಕ್ಕೆ ಆಗದೇ ಇರುವಂಥ ಕಡೆ ರೈಲನ್ನು ಬಿಡುವುದಕ್ಕಾಗುತ್ತದೆಯೇ?

ಶ್ರೀ ಎಂ.ಸಿ. ನಾಣಯ್ಯ :- ರೈಲನ್ನು ಕೆಲವು ಸಂದರ್ಭದಲ್ಲಿ ಬಿಡುತ್ತಿದ್ದೇವೆ.

ಶ್ರೀ ಎನ್. ಯೋಗೇಶ್ ಭಟ್:- ಪುತ್ತೂರಿನಲ್ಲಿ ಹೊಸ ಬಸ್ ಸ್ಟ್ಯಾಂಡ್‌ನ್ನು ಮಾಡುವ ಬಗ್ಗೆ ಕಾರ್ಯಕ್ರಮ ಕೈಗೆತ್ತಿಕೊಳ್ಳಲಾಗಿದೆಯೆಂದು ಮಾನ್ಯ ಮಂತ್ರಿಯವರು ಹೇಳಿದ್ದಾರೆ. ಅದೇ ರೀತಿ ಕುಕ್ಕೆ ಸುಬ್ರಮಣ್ಯ ಮತ್ತು ಕುಂದಾಪುರದಲ್ಲಿ ಹೊಸದಾಗಿ ಬಸ್ ಸ್ಟ್ಯಾಂಡ್‌ಗಳನ್ನು ನಿರ್ಮಾಣ ಮಾಡುವುದಕ್ಕೆ ಸಂಬಂಧಪಟ್ಟಂತೆ ಈಗಾಗಲೇ ಭೂಮಿಯನ್ನು ಖರೀದಿಸಲಾಗಿದೆಯೆಂದು ಸಹಾ ಉತ್ತರ ಕೊಡಲಾಗಿದೆ. ಅಲ್ಲಿ ಯಾವಾಗ ಬಸ್ ಸ್ಟ್ಯಾಂಡ್ ಕಟ್ಟುವ ಕೆಲಸವನ್ನು ಪ್ರಾರಂಭ ಮಾಡಲಾಗುವುದು?

ಶ್ರೀ ಎಂ.ಸಿ. ನಾಣಯ್ಯ :- ಕುಕ್ಕೆ ಸುಬ್ರಮಣ್ಯ ಮತ್ತು ಕುಂದಾಪುರದಲ್ಲಿ 1998-99 ರಲ್ಲಿ ಬಸ್ ಸ್ಟ್ಯಾಂಡ್ ಕಟ್ಟುವುದಕ್ಕೆ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ. ಆ ಕೆಲಸವನ್ನು ಆದಷ್ಟು ಬೇಗ ಮುಗಿಸಲಿಕ್ಕೆ ಪ್ರಯತ್ನ ಮಾಡಲಾಗುತ್ತದೆ.

ಕ.ರಾ.ರ.ಸಾ.ಸಂಸ್ಥೆ ಸಿಬ್ಬಂದಿ ನೇಮಕಾತಿ

64 (120) ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯನ್ನು ಎಷ್ಟು ವಿಭಾಗಗಳಾಗಿ ವಿಭಜಿಸಲಾಗಿದೆ. ಎಂದಿನಿಂದ ವಿಭಜಿಸಲಾಗಿದೆ (ಅವು ಯಾವುದು)?

ಆ) ಪ್ರತಿಯೊಂದು ಸಂಸ್ಥೆಯಲ್ಲಿ ಕೊರತೆ ಇರುವ ಸಿಬ್ಬಂದಿಯ ವಿವರ ನೀಡುವುದು

ಇ) ಕೊರತೆಯ ಹುದ್ದೆಗಳಿಗೆ ನೇಮಕಾತಿ ಮಾಡಲು ಕ್ರಮ ತೆಗೆದು ಕೊಳ್ಳಲಾಗಿದೆಯೇ; ಹಾಗಿದ್ದಲ್ಲಿ ಹುದ್ದೆವಾರು ವಿವರ ಒದಗಿಸುವುದು.

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಸಚಿವರು) :

ಅ) 4 ವಿಭಾಗಗಳಾಗಿ ವಿಭಜಿಸಲಾಗಿದೆ. ಅವುಗಳು

ಆ) 1) ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ

2) ಧಾರವಾಡ, ಕಾರವಾರ, ಬೆಳಗಾವಿ ಮತ್ತು ಬಿಜಾಪುರ ಜಿಲ್ಲೆಗಳನ್ನೊಳಗೊಂಡ ಒಂದು ಸಂಸ್ಥೆ

3) ಬಿದರ್, ಗುಲ್ಬರ್ಗಾ, ರಾಯಚೂರು, ಬಳ್ಳಾರಿ, ಜಿಲ್ಲೆಗಳನ್ನೊಳಗೊಂಡ ಒಂದು ಸಂಸ್ಥೆ. ಮತ್ತು

4) ಉಳಿದ ಜಿಲ್ಲೆಗಳನ್ನೊಳಗೊಂಡಂತೆ ಹಾಗೂ ಮೈಸೂರಿನ ರಾಷ್ಟ್ರೀಕೃತ ಪ್ರದೇಶಗಳನ್ನೊಳಗೊಂಡಂತೆ ಒಂದು ಸಂಸ್ಥೆ, ಇವುಗಳಲ್ಲಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಹಾಗೂ ಧಾರವಾಡ, ಕಾರವಾರ, ಬೆಳಗಾವಿ ಮತ್ತು ಬಿಜಾಪುರ ಜಿಲ್ಲೆಗಳನ್ನೊಳಗೊಂಡಂತೆ ವಾಯುವ್ಯ ಕರ್ನಾಟಕ ರಾಜ್ಯರಸ್ತೆ ಸಾರಿಗೆ ಸಂಸ್ಥೆಗಳನ್ನು ಕ್ರಮವಾಗಿ ದಿನಾಂಕ: 15-8-97 ಹಾಗೂ 1-1-97 ರಿಂದ ಅಸ್ತಿತ್ವಕ್ಕೆ ತರಲಾಗಿದೆ.

ಆ) ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಮತ್ತು ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗಳ ಸಿಬ್ಬಂದಿಯನ್ನು ಎರವಲು ಸೇವೆಯ ಮೇಲೆ ನಿಯೋಜಿಸಲಾಗಿದ್ದು, ಕರ್ನಾಟಕ ರಾಜ್ಯರಸ್ತೆ ಸಾರಿಗೆ ಸಂಸ್ಥೆಯ ಉದ್ಯೋಗಿಗಳಿಂದ ಪರಿಗಣಿಸುತ್ತಿರುವುದರಿಂದ ಸಂಸ್ಥೆವಾರು ಸಿಬ್ಬಂದಿ ವಿವರಣೆ ಬದಲಿಗೆ ಒಟ್ಟಾಗಿ ಮಾಹಿತಿಯನ್ನು ಅನುಬಂಧ-ಆ ದಲ್ಲಿ ನೀಡಲಾಗಿದೆ.

ಇ) ಕರ್ನಾಟಕ ರಾಜ್ಯರಸ್ತೆ ಸಾರಿಗೆ ಸಂಸ್ಥೆಯ ಪದವ್ಯಂದ ಮತ್ತು ನೇಮಕಾತಿ ನಿಯಮಾವಳಿಗಳು 1982 ರ ಪ್ರಕಾರ ಖಾಲಿ ಹುದ್ದೆಗಳನ್ನು ಬಡ್ತಿಯ ಮೂಲಕ ಹಾಗೂ ನೇರ ನೇಮಕಾತಿ ಮೂಲಕ ತುಂಬಲು ಅವಕಾಶ ಕಲ್ಪಿಸಿದ್ದು, ಅದರಂತೆ ಈಗಾಗಲೇ ಹಲವು ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ತುಂಬಲು ಜಾಹೀರಾತುಗಳನ್ನು ಹೊರಡಿಸಲಾಗಿದ್ದು, ನೇಮಕಾತಿ ಪ್ರಕ್ರಿಯೆಗಳು ಪ್ರಗತಿಯಲ್ಲಿದೆ. ವಿವರಗಳನ್ನು ಅನುಬಂಧ - ಆ ದಲ್ಲಿ ಅವಗಾಹಿಸಬಹುದು.

ಅನುಬಂಧ - 'ಅ'

ಕ.ರಾ.ರ.ಸಾ.ಸಂಸ್ಥೆಯಲ್ಲಿ (ಬಿ.ಎಂ.ಟಿ.ಸಿ. ಮತ್ತು ವಾಯುವ್ಯ ಕ.ರ.ಸಾ.ಸಂಸ್ಥೆ ಒಳಗೊಂಡಂತೆ) ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ತುಂಬಲು ಜಾಹೀರಾತುಗೊಳಿಸಿರುವ ವಿವರಗಳು ಈ ಕೆಳಕಂಡಂತಿದೆ:-

ಕ್ರಮ ಸಂಖ್ಯೆ	ಹುದ್ದೆಗಳ ವಿವರ	ಖಾಲಿ ಹುದ್ದೆಗಳ ಸಂಖ್ಯೆ
1.	ಸಹಾಯಕ ಆಡಳಿತಾಧಿಕಾರಿ, ದರ್ಜೆ - 2	4
2.	ಸಹಾಯಕ ಲೆಕ್ಕಾಧಿಕಾರಿ, ದರ್ಜೆ - 2	5
3.	ಭದ್ರತಾಧಿಕಾರಿ, ದರ್ಜೆ - 2	2
4.	ಕಾರ್ಮಿಕ ಕಲ್ಯಾಣಾಧಿಕಾರಿ, ದರ್ಜೆ - 2	1
5.	ಸಹಾಯಕ ಕಾನೂನು ಅಧಿಕಾರಿ, ದರ್ಜೆ-2	3
6.	ಸಹಾಯಕ ಸಂಚಾರ ವ್ಯವಸ್ಥಾಪಕರು, ದರ್ಜೆ-2	11
7.	ಸಹಾಯಕ ತಾಂತ್ರಿಕ ಶಿಲ್ಪಿ, ದರ್ಜೆ-2	7
8.	ಸಹಾಯಕ ಸಂಖ್ಯಾ ಶಾಸ್ತ್ರಜ್ಞ, ದರ್ಜೆ-2	3
9.	ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ದರ್ಜೆ-2	1
10.	ಸಹಾಯಕ ಉಗ್ರಾಣಾಧಿಕಾರಿ, ದರ್ಜೆ-2	3
11.	ಸಂಚಾರ ನಿರೀಕ್ಷಕರು, ದರ್ಜೆ-3	37
12.	ಮೇಲ್ವಿಚಾರಕರು (ಸಿಬ್ಬಂದಿ), ದರ್ಜೆ-3	79
13.	ಮೇಲ್ವಿಚಾರಕರು (ಲೆಕ್ಕಪತ್ರ), ದರ್ಜೆ-3	31
14.	ಮೇಲ್ವಿಚಾರಕರು (ಅಂಕಿಅಂಶ), ದರ್ಜೆ-3	04
15.	ಉಗ್ರಾಣ ರಕ್ಷಕ, ದರ್ಜೆ-3	09
16.	ವಿಭಾಗೀಯ ಭದ್ರತಾ ನಿರೀಕ್ಷಕರು, ದರ್ಜೆ- 3	01
17.	ಪಾರುಪತ್ತೇಗಾರರು (ತಾಂತ್ರಿಕ) ದರ್ಜೆ- 3	11
18.	ಪಾರುಪತ್ತೇಗಾರರು (ಮುದ್ರಣ) ದರ್ಜೆ- 3	02
19.	ಸಹಾಯಕ ಅಭಿಯಂತರರು, ದರ್ಜೆ- 3	09
20.	ಕಿರಿಯ ಅಭಿಯಂತರರು, ದರ್ಜೆ- 3	03
21.	ಸಹಾಯಕ ಅಭಿಯಂತರರು, ದರ್ಜೆ- 3	03
22.	ಸಹಾಯಕ ಸಂಚಾರ ನಿರೀಕ್ಷಕರು, ದರ್ಜೆ- 3	10
23.	ಸಹಾಯಕ ಲೆಕ್ಕಿಗ, ದರ್ಜೆ- 3	01
24.	ಸಹಾಯಕ ನಕ್ಷೇಗಾರ, ದರ್ಜೆ- 3	03
25.	ಸಹಾಯಕ ವಿದ್ಯುತ್ ಮೇಲ್ವಿಚಾರಕರು, ದರ್ಜೆ- 3	07
26.	ಬೆರಳಚ್ಚುಗಾರರು, ದರ್ಜೆ- 3	06
27.	ಫಾರ್ಮಾಸಿಸ್ಟ್, ದರ್ಜೆ- 3	04

28.	ಭದ್ರತಾ ರಕ್ಷಕರು, ದರ್ಜೆ-4	160
29.	ಸ್ಟಾಫ್‌ನರ್ಸ್	12
30.	ಕುಶಲಕರ್ಮಿ, ದರ್ಜೆ-3	185
31.	ಸಹಾಯಕ ಕುಶಲಕರ್ಮಿ, ದರ್ಜೆ-3	115
32.	ಸಹಾಯಕ 'ಬಿ' ದರ್ಜೆ-4	123
33.	ಕಿರಿಯ ಶೀಘ್ರಲಿಪಿಗಾರರು, ದರ್ಜೆ-3	07
34.	ಚಾಲಕ	756
	ಒಟ್ಟು	**1698**

ಅಕಾರಿಗಳ ವರ್ಗ

ಕ್ರಮ ಸಂಖ್ಯೆ	ಹುದ್ದೆಗಳು	ಅಧಿಕಾರಿಗಳ ಕೊರತೆ
1.	ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ)	1
2.	ಪ್ರಧಾನ ವ್ಯವಸ್ಥಾಪಕರು (ಸಂಚಾರ)	1
3.	ಮುಖ್ಯ ಸಂಚಾರ ವ್ಯವಸ್ಥಾಪಕರು (ವಾಣಿಜ್ಯ)	1
4.	ವ್ಯವಸ್ಥಾಪಕರು, ಸಂಪನ್ಮೂಲ ಅಭಿವೃದ್ಧಿ	1
5.	ಮುಖ್ಯ ಯೋಜನಾ ಮತ್ತು ಸಂಖ್ಯಾಧಿಕಾರಿ	1
6.	ಮುಖ್ಯ ಲೆಕ್ಕಾಧಿಕಾರಿ ಹಾಗೂ ಆರ್ಥಿಕ ಸಲಹೆಗಾರರು ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಹುಬ್ಬಳ್ಳಿ	1
7.	ಮುಖ್ಯ ತಾಂತ್ರಿಕ ಶಿಲ್ಪಿ, ವಾ.ಕ.ರ. ಸಾ.ಸಂಸ್ಥೆ	1
8.	ಮುಖ್ಯ ಸಂಚಾರ ವ್ಯವಸ್ಥಾಪಕರು	1
9.	ಕಾಸ್ಟ್ ಅಕೌಂಟೆಂಟ್	1
10.	ಉಪ ಉಗ್ರಾಣ ನಿಯಂತ್ರಣಾಧಿಕಾರಿ	1
11.	ಕಾರ್ಯದರ್ಶಿ, ಮಂಡಳಿ, ಕ.ರಾ.ರ.ಸಾ.ಸಂ	1
12.	ವಿಶೇಷಾಧಿಕಾರಿ, ಹಗರಿ ಬೊಮ್ಮನಹಳ್ಳಿ	1
13.	ಕ್ರೀಡಾಧಿಕಾರಿ, ಕೇಂದ್ರ ಕಛೇರಿ	1
14.	ಕಾರ್ಯದರ್ಶಿ, ಮಂಡಳಿ ವಾ.ಕ.ರಾ.ಸಾ.ಸಂ. ಹುಬ್ಬಳ್ಳಿ	1
15.	ಮುಖ್ಯ ಭದ್ರತ ಮತ್ತು ಜಾಗೃತಾಧಿಕಾರಿ, ವಾ.ಕ.ರ.ಸಾ.ಸಂ.	1
16.	ಮುಖ್ಯ ಭದ್ರತ ಮತ್ತು ಜಾಗೃತಾಧಿಕಾರಿ, ವಾ.ಕ.ರ.ಸಾ.ಸಂ.	1
17.	ಲೆಕ್ಕಾಧಿಕಾರಿ	3
18.	ಉಗ್ರಾಣಾಧಿಕಾರಿ	2
19.	ಉಪ ಕಾನೂನು ಅಧಿಕಾರಿ	5

20.	ವಿಭಾಗೀಯ ಸಂಚಾರ ಅಧಿಕಾರಿ	33
21.	ವಿಭಾಗೀಯ ತಾಂತ್ರಿಕ ಶಿಲ್ಪ	29
22.	ಉಪ ಮುಖ್ಯ ಭದ್ರತಾಧಿಕಾರಿ	2
23.	ಉಪ ಮುಖ್ಯ ಸಂಖ್ಯಾ ಶಾಸ್ತ್ರಜ್ಞ	1
24.	ಹಿರಿಯ ಆಪ್ತ ಕಾರ್ಯದರ್ಶಿ	1
25.	ವೈದ್ಯಾಧಿಕಾರಿ (ಕಿರಿಯ)	1
26.	ಸಹಾಯಕ ಆಡಳಿತಾಧಿಕಾರಿ	9
27.	ಸಹಾಯಕ ಲೆಕ್ಕಾಧಿಕಾರಿ	7
28.	ಭದ್ರತಾಧಿಕಾರಿ	13
29.	ಕಾರ್ಮಿಕ ಕಲ್ಯಾಣಾಧಿಕಾರಿ	9
30.	ಸಹಾಯಕ ಕಾನೂನು ಅಧಿಕಾರಿ	10
31.	ಸಹಾಯಕ ಸಂಚಾರ ವ್ಯವಸ್ಥಾಪಕರು	1
32.	ಸಹಾಯಕ ತಾಂತ್ರಿಕ ಶಿಲ್ಪ	4
33.	ವಿಭಾಗೀಯ ಸಂಖ್ಯಾ ಶಾಸ್ತ್ರಜ್ಞ (ಕಿರಿಯ)	8
34.	ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್	4
35.	ಆಪ್ತ ಕಾರ್ಯದರ್ಶಿ	2
36.	ಸಹಾಯಕ ವೈದ್ಯಾಧಿಕಾರಿ (ಪುರುಷ)	13
37.	ಸಹಾಯಕ ವೈದ್ಯಾಧಿಕಾರಿ (ಮಹಿಳಾ)	13
38.	ಸಹಾಯಕ ಘಟಕ ವ್ಯವಸ್ಥಾಪಕರು (ಎ. ಟಿ. ಎಂ)	34
39.	ಸಹಾಯಕ ಘಟಕ ವ್ಯವಸ್ಥಾಪಕರು (ಎ. ಟಿ. ಎಂ.)	34

ಅನುಬಂಧ - 'ಅ'

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಮತ್ತು ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಹುಬ್ಬಳ್ಳಿ, ಇವುಗಳ ಸಿಬ್ಬಂದಿಯನ್ನು ಎರವಲು ಸೇವೆಯ ಮೇಲೆ ನಿಯೋಜಿಸಲಾಗಿದ್ದು ಅವರುಗಳನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಉದ್ಯೋಗಿಗಳೆಂದೇ ಪರಿಗಣಿಸುತ್ತಿರುವುದರಿಂದ ಸಂಸ್ಥೆವಾರು ಸಿಬ್ಬಂದಿ ವಿವರಣೆ ಬದಲಿಗೆ ಒಟ್ಟಾಗಿ ಮಾಹಿತಿಯನ್ನು ನೀಡಿದೆ.

ಕ್ರಮ ಸಂಖ್ಯೆ	ಹುದ್ದೆಗಳು	ಸಿಬ್ಬಂದಿ ಕೊರತೆ
1.	ಸಿಬ್ಬಂದಿ ಅಧೀಕ್ಷಕ	22
2.	ಸಿಬ್ಬಂದಿ ಮೇಲ್ವಿಚಾರಕ	108
3.	ಸಹಾಯಕ	39
4.	ಹಿರಿಯ ಶೀಘ್ರಲಿಪಿಗಾರ	1
5.	ಕಿರಿಯ ಶೀಘ್ರಲಿಪಿಗಾರ	25

6.	ಕಿರಿಯ ಸಹಾಯಕ	127
7.	ಬೆರಳಚ್ಚುಗಾರ	71
8.	ಹವಿಲ್ದಾರ್	4
9.	ಕಛೇರಿ ಸಹಾಯಕ	35
10.	ಸ್ವೀಪರ್	16
11.	ಮಾಲಿ ಸ್ವೀಪರ್	5
12.	ಲೆಕ್ಕಪತ್ರ ಅಧೀಕ್ಷಕ	16
13.	ಲೆಕ್ಕಪತ್ರ ಮೇಲ್ಬಿಚಾರಕ	40
14.	ಸಹಾಯಕ ಲೆಕ್ಕಿಗ	17
15.	ಉಗ್ರಾಣ ಅಧೀಕ್ಷಕ	14
16.	ಉಗ್ರಾಣ ಪಾಲಕ	20
17.	ಸಹಾಯಕ ಉಗ್ರಾಣಪಾಲಕ	44
18.	ಅಂಕಿ ಅಂಶ ಅಧೀಕ್ಷಕ	3
19.	ಅಂಕಿ ಅಂಶ ಮೇಲ್ಬಿ ಚಾರಕ	24
20.	ಅಂಕಿ ಅಂಶ ಸಹಾಯಕ	58
21.	ವಿಭಾಗೀಯ ಭದ್ರತ ನಿರೀಕ್ಷಕ	3
22.	ಸಹಾಯಕ ಭದ್ರತ, ನಿರೀಕ್ಷಕ	17
23.	ಕಾವಲು ಮತ್ತು ಪಹರೆ ನಿರೀಕ್ಷಕ	14
24.	ಭದ್ರತ ಹವಿಲ್ದಾರ್	18
25.	ಹಿರಿಯ ಭದ್ರತೆ ರಕ್ಷಕ	24
26.	ಭದ್ರತ ರಕ್ಷಕ	398
27.	ಸಹಾಯಕ ಸಂಚಾರ ಅಧೀಕ್ಷಕ	86
28.	ಸಂಚಾರ ನಿರೀಕ್ಷಕ	72
29.	ಸಹಾಯಕ ಸಂಚಾರ ನಿರೀಕ್ಷಕ	175
30.	ಸಂಚಾರ ನಿಯಂತ್ರಕ	119
31.	ಸಹಾಯಕ ಕಾರ್ಯ ಅಧೀಕ್ಷಕ	112
32.	ಪಾರುಪತ್ತೆಗಾರ	124
33.	ಮುಖ್ಯ ಕುಶಲಕರ್ಮಿ	96
34.	ಕುಶಲಕರ್ಮಿ	950
35.	ಸಹಾಯಕ ಕುಶಲಕರ್ಮಿ	573
36.	ಸಹಾಯಕ - 'ಎ'	240
37.	ಸಹಾಯಕ - 'ಬಿ'	980
38.	ಸಹಾಯಕ ಇಂಜಿನಿಯರ್ (ಸಿವಿಲ್)	16
39.	ಮೇಲ್ಬಿಚಾರಕ (ವಿದ್ಯುತ್)	2

40.	ಕಿರಿಯ ಇಂಜಿನಿಯರ್	4
41.	ನಕ್ಷೆಗಾರ	3
42.	ಸಹಾಯಕ ನಕ್ಷೆಗಾರ	8
43.	ಸಹಾಯಕ ಮೇಲ್ಚಿಚಾರಕ (ವಿದ್ಯುತ್)	13
44.	ಚಾಲಕ	1384
45.	ನಿರ್ವಾಹಕ	1104
46.	ಸ್ಟಾಫ್‌ನರ್ಸ್	34
47.	ಫಾರ್ಮಸಿಸ್ಟ್	13
48.	ಎಕ್ಸರೇ ಟೆಕ್ನಿಷಿಯನ್	4
49.	ಜೂನಿಯರ್ ಲ್ಯಾಬ್ ಟೆಕ್ನಿಷಿಯನ್	17
50.	ಅಟೆಂಡರ್ ಕಾಮ್ ಡ್ರೆಸರ್	43
51.	ಧೋಬಿ	4
52.	ಜೂನಿಯರ್ ಫೋಗ್ರಾಂಮರ್	10
53.	ಡಾಟಾ ಎಂಟ್ರಿ ಅಪರೇಟರ್	6
54.	ಕೇರ್ ಟೇಕರ್ ಕಮ್ ಕುಕ್	20
55.	ಭದ್ರತ ರಕ್ಷಕ ಕಮ್ ರೂಮ್ ಬಾಯಿ	8
56.	ಸ್ವಾಗತಕಾರ	8
57.	ಗ್ರೈಂಡರ್	2
58.	ಕ್ಲೀನರ್	3
59.	ಚಾರ್ಜ್‌ಮನ್ (ಪ್ರಿಂಟಿಂಗ್)	5
60.	ಕಂಪೋಸ್ಟರ್	1
61.	ಬೈಂಡರ್	3
62.	ಮೆಷಿನ್ ಅಪರೇಟರ್	4
63.	ಅಸಿಸ್ಟೆಂಟ್ ಕಂಪೋಸ್ಟರ್	5
64.	ಅಸಿಸ್ಟೆಂಟ್ ಬೈಂಡರ್	4
65.	ಅಸಿಸ್ಟೆಂಟ್ ಮೆಷಿನ್ ಅಪರೇಟರ್	12
66.	ಅಸಿಸ್ಟೆಂಟ್ ಮೆಷಿನ್ ಅಪರೇಟರ್	3
67.	ಸೀನಿಯರ್ ಬೈಂಡರ್	2
68.	ಸೀನಿಯರ್ ಟಿಕೆಟ್ ಎಕ್ಸಾಮೀನರ್	1
69.	ಟಿಕೆಟ್ ವೆರಿಫೈಯರ್	3
70.	ಟಿಕೆಟ್ ಚೆಲ್ಲರ್	6
71.	ಪ್ರೂಫ್ ಎಕ್ಸಾಮಿನರ್	1
72.	ಮೆಕ್ಯಾನಿಕ್	1
73.	ಎಲೆಕ್ಟ್ರೀಷಿಯನ್	1
74.	ಹೆಲ್ಪರ್ (ಮುದ್ರಣ)	32

ಶ್ರೀ ಯು.ಬಿ. ಬಣಕಾರ್:- ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯನ್ನು ಈಗಾಗಲೇ ನಾಲ್ಕು ವಿಭಾಗಗಳಾಗಿ ವಿಭಜನೆ ಮಾಡಲಾಗಿದೆ. ಬೆಂಗಳೂರು ಮಹಾ ನಗರ ಸಾರಿಗೆ ಸಂಸ್ಥೆ ಹಾಗೂ ಧಾರವಾಡ, ಕಾರವಾರ, ಬೆಳಗಾಂ ಮತ್ತು ಬಿಜಾಪುರ ಜಿಲ್ಲೆಗಳನ್ನೊಳಗೊಂಡಂತೆ ವಾಯುವ್ಯ ರಸ್ತೆ ಸಾರಿಗೆ ಸಂಸ್ಥೆಗಳೆಂದು ಈಗಾಗಲೇ ಪ್ರಾರಂಭ ಮಾಡಲಾಗಿದೆ. ಉಳಿದಂಥ ಎರಡು ಸಂಸ್ಥೆಗಳನ್ನು ಯಾವಾಗ ಪ್ರಾರಂಭ ಮಾಡಲಾಗುತ್ತದೆ? ಅಧಿಕಾರಿಗಳ ಮಟ್ಟದಲ್ಲಿ 253 ಹುದ್ದೆಗಳು, ಚಾಲಕ ಮತ್ತು ಮೆಕ್ಯಾನಿಕ ಹುದ್ದೆಗಳು ಸುಮಾರು 10 ಸಾವಿರ ಖಾಲಿ ಇವೆ. ಈ ಹುದ್ದೆಗಳನ್ನು ತುಂಬುವುದಕ್ಕಾಗಿ ಎಷ್ಟು ದಿವಸಗಳಲ್ಲಿ ಈ ನೇಮಕಾತಿ ಪ್ರಕ್ರಿಯೆನ್ನು ಮುಗಿಸಲಾಗುತ್ತದೆಂದು ಕೇಳ ಬಯಸುತ್ತೇನೆ. ಈ ನೇಮಕಾತಿ ಪ್ರಕ್ರಿಯೆ ಮುಗಿಯುವರೆಗೂ ಹೆಚ್ಚಾಗಿ ದೂರದ ಸಾರಿಗೆಗಳ ಬಗ್ಗೆ ಗಮನ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ (ಸಾರಿಗೆ ಸಚಿವರ ಪರವಾಗಿ): ಮಾನ್ಯ ಸಭಾಧ್ಯಕ್ಷರೆ, ಬೆಂಗಳೂರು ನಗರಕ್ಕೆ ಸಂಬಂಧಪಟ್ಟ ಹಾಗೆ ಈಗಾಗಲೇ ಬಿ.ಎಂ.ಆರ್.ಟಿ.ಸಿ ಯನ್ನು ಕಾರ್ಯರೂಪಕ್ಕೆ ತಂದಿದ್ದೇವೆ. ಗುಲ್ಬರ್ಗಾ ಮತ್ತು ಹಳೇ ಮೈಸೂರಿಗೆ ಸಂಬಂಧಪಟ್ಟಂತೆ ಹಾಗೆಯೂ ಕಾರ್ಯರೂಪಕ್ಕೆ ತಂದಿದ್ದೇವೆ. ಗುಲ್ಬರ್ಗಾ ಮತ್ತು ಹಳೆ ಮೈಸೂರಿಗೆ ಸಂಬಂಧಪಟ್ಟಂತೆ ಕೆಲಸ ಇನ್ನೂ ಆಗಿಲ್ಲ. 1998-99 ರೊಳಗೆ ಕೆಲಸವನ್ನು ಮಾಡಬೇಕೆಂದು ಪ್ರಕ್ರಿಯೆನ್ನು ಪ್ರಾರಂಭ ಮಾಡಿದ್ದೇವೆ. ಆಮೇಲೆ ಸಿಬ್ಬಂದಿ ವರ್ಗದವರನ್ನು ತುಂಬುವ ಬಗ್ಗೆ ಕೇಳಿದ್ದಾರೆ, ಈಗಾಗಲೇ ನೇಮಕಾತಿ ಸಮಿತಿಯನ್ನು ಮಾಡಿದ್ದೇವೆ, ಜಾಹೀರಾತರನ್ನೂ ಹೊರಡಿಸಲಾಗಿದೆ. ಸಿಬ್ಬಂದಿ ಕೊರತೆಯನ್ನು ತುಂಬಲಿಕ್ಕೆ ಕಾರ್ಯಕ್ರಮಗಳನ್ನು ಇನ್ನು ಮೂರು ತಿಂಗಳಲ್ಲಿ ಮಾಡಿ ಮುಗಿಸುತ್ತೇವೆ. ಸಿಬ್ಬಂದಿ ಕೊರತೆಯಿಂದ ಗ್ರಾಮಾಂತರ ಪ್ರದೇಶಗಳಿಗೆ ಓಡುವ ಬಸ್‌ಗಳ ಸಂಖ್ಯೆ ಕಡಿಮೆ ಆಗಬಾರದೆಂದು ಹೇಳಿದ್ದಾರೆ. ಅದರ ಬಗ್ಗೆ ಸರ್ಕಾರ ಗಮನ ಕೊಟ್ಟು ಗ್ರಾಮಾಂತರ ಪ್ರದೇಶಗಳಲ್ಲಿ ಬಸ್‌ಗಳನ್ನು ತಪ್ಪದೆ ಓಡಿಸುವ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ತಿಳಿಸಲಾಗುತ್ತದೆ.

ಅಧ್ಯಕ್ಷರು :- ಮಾನ್ಯ ನಾಣಯ್ಯನವರೇ, ಇದನ್ನೆಲ್ಲಾ ನೋಡಿ ನಾನು ಏನು ಹೇಳುತ್ತೇನೆಂದರೆ, ಇವೆಲ್ಲಾ ಕಾಮನ್ ಮ್ಯಾನ್‌ಗೆ ಕನ್‌ಸರ್ನ್ ಇರಬೇಕಾಗುತ್ತದೆ. ಉತ್ತರ ಕೊಡಬೇಕೆನ್ನುವ ಉದ್ದೇಶದಿಂದ ಉತ್ತರ ಕೊಡುವುದು ಬೇಡ. ಸಾವಿರಸಲ ಹೇಳಿದರೂ ನಮ್ಮ ಊರಿಗೆ ಬಸ್ ಹಾಕಿಲ್ಲ, ಸುಮ್ಮನೆ, ಸಿಬ್ಬಂದಿ, ಶೆಡ್ಯೂಲ್, ಬಸ್, ಜಾತ್ರೆ, ಮದುವೆ ಎಂದು ಯಾವುದೋ ಒಂದನ್ನು ಹೇಳುತ್ತಾರೆ. ಅವರು ಬಸ್ ಹಾಕುವುದಿಲ್ಲ. ಹಾಕಿದರೂ ಡ್ರೈವರ್ ಮನಸ್ಸು ಬಂದರೆ ಬಸ್ ಬರುತ್ತದೆ, ಇಲ್ಲವೆಂದರೆ ಇಲ್ಲ.

ಶ್ರೀ ಎಂ.ಸಿ. ನಾಣಯ್ಯ :- ತಾವು ಹೇಳುವಷ್ಟು ಮಟ್ಟಿಗೆ, ಅಧ್ಯಕ್ಷರು:- ನಮಗೆ ಎಷ್ಟು ಸಹನೆ ಇರಬೇಕು? ನಮ್ಮ ತಾಳ್ಮೆಗೆ ಒಂದು ಮಿತಿ ಇಲ್ಲವೇ?

ಶ್ರೀ ಎಂ.ಸಿ. ನಾಣಯ್ಯ :- ಇದೆ. ನಾನು ಒಪ್ಪಿಕೊಂಡೆ.

ಅಧ್ಯಕ್ಷರು :- ಕೈ ಎರಡೂ ಕಟ್ಟಿಕೊಂಡು, ಬೆನ್ನು ಬಗ್ಗಿಸಿ, ತಲೆ ಬಗ್ಗಿಸಿ ಅವರ ಪಾದಾರವಿಂದಗಳಲ್ಲಿ ನಮನಗಳನ್ನು ಸಲ್ಲಿಸಿ ಅವರಿಗೆ ಕರುಣೆ ಬಂದು ಯಾವಾಗ ಅವರ ಮನಸ್ಸಿಗೆ ಬರುತ್ತದೆಯೋ ಆವಾಗ ಕೊಡಲಿ. ಜನ ಸಬಾರ್ಡಿನೇಟ್ಸ್, ಇವರು ದೊಡ್ಡವರು. ನಾವು ಕೆ.ಎಸ್.ಆರ್.ಟಿ.ಸಿ. ಯವರಿಗೆ ಸಲಾಮು ಹೊಡೆದಿದ್ದೇವೆ. ಅವರಿಗೆ ಖುಷಿ ಬಂದ ದಿವಸ ಬಸ್‌ನ್ನು ಹಾಕಿಕೊಡಲಿ.

ಶ್ರೀ ಎಂ.ಸಿ. ನಾಣಯ್ಯ :- ಬಸ್‌ಗಳು ಕೊರತೆ ಇರುವಂಥ ಭಾಗದಲ್ಲಿ ಬಸ್‌ಗಳನ್ನು ಹಾಕುವುದಕ್ಕಾಗಿ ಹಂತ ಹಂತವಾಗಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಕಳೆದ ಎರಡು ವರ್ಷಗಳಿಂದ ನಾವು ಕೆ.ಎಸ್.ಆರ್.ಟಿ.ಸಿ.ಯನ್ನು ಸುಧಾರಣೆ ಮಾಡಿದ್ದೇವೆ. ಸುಧಾರಣೆ ಮಾಡಿಲ್ಲವೆಂದು ಹೇಳಿದರೆ ನಾನು ಒಪ್ಪುವುದಿಲ್ಲ

ಶ್ರೀ ವಾಟಾಳ್ ನಾಗರಾಜ್: -ಅದು ಇಲ್ಲಾ ದಿವಾಳಿ ಎದ್ದು ಹೋಗಿದೆ. ಎಲ್ಲಿ ಬಸ್‌ಗಳು ಬರಬೇಕೋ ಅಲ್ಲಿ ಬರುವುದಿಲ್ಲ. ಜನಗಳಿಗೆ ಅನಾನುಕೂಲವಾಗಿದೆ. ಈ ಸಾರಿಗೆ ವ್ಯವಸ್ಥೆ ಸಂಪೂರ್ಣ ನಾಶವಾಗಿ ಹೋಗಿದೆ.

ಶ್ರೀ ಜಿ.ವಿ. ಶ್ರೀ ರಾಮರೆಡ್ಡಿ : ಜನತೆ ಬಗ್ಗೆ ಕಾಳಜಿ ಇರಲಿ. ಸರ್ಕಾರವನ್ನು ಸಮರ್ಥನೆ ಮಾಡಬೇಕೆನ್ನುವ ದೃಷ್ಟಿಯಿಂದ ಉತ್ತರ ಕೊಡುವುದು ಬೇಡ.

ಅಧ್ಯಕ್ಷರು:- ನಾನು ತಮಗೆ ಇಷ್ಟೇ ಹೇಳುತ್ತೇನೆ, ನನ್ನ ಊರಿನ ಹೆಸರು ಅಡ್ಡಗಲ್ಲು. ನನ್ನ ಊರಿನಿಂದ ಶ್ರೀನಿವಾಸಪುರ ತಾಲ್ಲೂಕು ಹೆಡ್‌ಕ್ವಾರ್ಟರ್‌ಗೆ ಹೋಗಬೇಕಾದರೆ ಸುಮಾರು 28 ಕಿಲೋಮೀಟರ್ ಹೋಗಬೇಕು. ಈ 28 ಕಿಲೋಮೀಟರ್ ದೂರ 3 ಬಸ್‌ಗಳನ್ನು ಬದಲಾಯಿಸಿ ಎರಡೂವರೆ ಗಂಟೆ ಕಾಲ ಹೋಗಬೇಕು. ಅಲ್ಲಿಗೆ ಒಂದು ಬಸ್ ಹಾಕಿ ಎಂದು 20 ಸಾರಿ ಹೇಳಿದ್ದರೂ ಇವತ್ತಿನವರೆಗೂ ಬಸ್ ಹಾಕಿಲ್ಲ. ನಾನು ವಿಧಾನ ಸಭೆಯ ಅಧ್ಯಕ್ಷನಾಗಿ 3 ವರ್ಷಗಳಾಗುತ್ತಾ ಬಂತು. ಇದುವರೆಗೂ ಆ ಕೆಲಸ ಆಗಿಲ್ಲ

ಶ್ರೀ ವಾಟಾಳ್ ನಾಗರಾಜ್ :- ಅಧ್ಯಕ್ಷರ ಕ್ಷೇತ್ರದಲ್ಲೇ ಹೀಗಾಗಿದೆ. ನನ್ನ ಕ್ಷೇತ್ರದಲ್ಲಿ 5 ಬಸ್‌ಗಳು ನಿಂತು 6 ತಿಂಗಳಾಯಿತು. ಯಾರ ಮುಂದೆ ನಾವು ಹೇಳುವುದು? ಹೇಳಿದರೂ ಅದು ಕೋಣನ ಮುಂದೆ ಕಿನ್ನರಿ ಬಾರಿಸಿದ ಹಾಗೆ ಆಗಿದೆ. ಸಾಮಾನ್ಯ ಜನರಿಗೆ ಇದರಿಂದ ಏನು ಅನುಕೂಲವಾಗುತ್ತಿಲ್ಲ. ಸಾರಿಗೆ ಸಂಸ್ಥೆ ಸಂಪೂರ್ಣವಾಗಿ ಕೆಟ್ಟು ಕುಲಗೆಟ್ಟು ಹೋಗಿದೆ.

10.40 ಎ.ಎಂ.

ಶ್ರೀ ಎಂ.ಸಿ. ನಾಣಯ್ಯ :- ಮಾನ್ಯ ಸದಸ್ಯರ ಕಳಕಳಿ ಏನು ಇದೆ ಅದನ್ನು ಸರ್ಕಾರ ಅರಿತುಕೊಂಡಿದೆ. ಈ ಸಂದರ್ಭದಲ್ಲಿ ನಮ್ಮ ಕೆ.ಎಸ್.ಆರ್.ಟಿ.ಸಿ. ಬಸ್ಸುಗಳು ಗ್ರಾಮಾಂತರ ಪ್ರದೇಶಗಳಲ್ಲಿ ನಾವು ನ್ಯಾಷನಲೈಸ್ ಮಾಡಿರತಕ್ಕಂಥ ರೂಟ್‌ಗಳು ಏನು ಇವೆ ಆ ಎಲ್ಲಾ ಭಾಗದಲ್ಲಿ ಸರಿಯಾಗಿ ಹೋಗುತ್ತಾ ಇಲ್ಲ ಎನ್ನುವುದು ನಮ್ಮ ಗಮನಕ್ಕೆ ಬಂದಿದೆ. ಆದರೆ ಕಳೆದ ಮೂರು ವರ್ಷಗಳಿಂದ ಸರಿಯಾದ ರೀತಿಯಲ್ಲಿ ಇದನ್ನು ನಡಿಸುವುದಕ್ಕೆ ಕ್ರಮವನ್ನು ಕೈಗೊಂಡಿದ್ದೇವೆ. ಇದರೆ ಬಗ್ಗೆ ಹೊಸ ಚಿಂತನೆಯನ್ನು ಮಾಡುತ್ತೇವೆ.

ನರಸಿಂಹರಾಜ ಕ್ಷೇತ್ರದ ರಾಜೇಂದ್ರನಗರ ಬಸ್ ನಿಲ್ದಾಣ ನಿರ್ಮಾಣ

66(245) ಶ್ರೀ ಮಾರುತಿರಾವ್ ಪವಾರ್ (ನರಸಿಂಹರಾಜ) : ಮಾನ್ಯ ಸಾರಿಗೆ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?